# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 345

2) ಸದಸ್ಯರ ಹೆಸರು : ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)

3) ಉತ್ತರಿಸಬೇಕಾದ ದಿನಾಂಕ : 13-08-2025

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಮೀನುಗಾರಿಕೆ ಹಿತದೃಷ್ಟಿಯಿಂದ ಹಳೆಯ ದೋಣಿಗಳನ್ನು ಅಧುನಿಕರಿಸಲು ಮತ್ತು 15 ವರ್ಷ ಮೇಲ್ಪಟ್ಟು ಇಂಜಿನ್‌ಗಳನ್ನು ಬದಲಾಯಿಸಲು ಸರ್ಕಾರದ ವತಿಯಿಂದ ಸಬ್ಸಿಡಿ ನೀಡಲಾಗುತ್ತಿದ್ದು, ರಾಜ್ಯದ ಎಷ್ಟು ಮೀನುಗಾರರು ಕಳೆದ 3 ವರ್ಷದಲ್ಲಿ ಈ ಯೋಜನೆಯ ಲಾಭವನ್ನು ಪಡೆದಿರುತ್ತಾರೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ರಫ್ತು ಸಾಮರ್ಥ್ಯಕ್ಕಾಗಿ ಅಸ್ತಿತ್ವದಲ್ಲಿರುವ ಮೀನುಗಾರಿಕಾ ದೋಣಿಗಳ ಉನ್ನತೀಕರಣ ಕಾರ್ಯಕ್ರಮದಡಿ ಘಟಕ ವೆಚ್ಚ ರೂ.15.00 ಲಕ್ಷಕ್ಕೆ ಸಾಮಾನ್ಯ ವರ್ಗದ ಫಲಾನುಭವಿಗೆ ರೂ.6.00 ಲಕ್ಷ ಮತ್ತು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಮಹಿಳಾ ಫಲಾನುಭವಿಗೆ ರೂ.9.00 ಲಕ್ಷ ಸಹಾಯಧನ ನೀಡುವ ಕಾರ್ಯಕ್ರಮವಿದೆ. ಸದರಿ ಕಾರ್ಯಕ್ರಮದಡಿ ಕಳೆದ ಮೂರು ವರ್ಷದಲ್ಲಿ ಮೂರು ಕರಾವಳಿ ಜಿಲ್ಲೆಗಳಿಂದ ಯಾವ ಮೀನುಗಾರರು ಇದರ ಲಾಭ ಪಡೆದಿರುವುದಿಲ್ಲ.<br><br>"ರಾಜ್ಯದಲ್ಲಿ ನೋಂದಣಿಯಾಗಿರುವ ಮೋಟಾರೀಕೃತ ದೋಣಿಗಳಲ್ಲಿ 15 ವರ್ಷ ಕಾಲಾವಧಿ ಮೀರಿರುವ ಹಳೆಯ ಇಂಜಿನ್‌ಗಳನ್ನು ಬದಲಾಯಿಸಿ ಹೊಸ ಇಂಜಿನ್ ಖರೀದಿಸಲು ಶೇ.50ರಷ್ಟು ಒಂದು ಲಕ್ಷ ರೂ. ಮಿತಿಗೊಳಪಟ್ಟು ಸಹಾಯಧನ ನೀಡಲಾಗುವುದು" ಎಂದು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿದ್ದು, ಅದರಂತೆ, ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/91/ಮೀಇಯೋ/2025, ದಿನಾಂಕ:11-08-2025 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ. |
| ಆ) | ಮೀನು ನಷ್ಟವನ್ನು ಕಡಿಮೆಗೊಳಿಸಲು ಮತ್ತು ಆದಾಯವನ್ನು ಸುಧಾರಿಸಲು ಅಧುನಿಕ ತಂತ್ರಜ್ಞಾನ ಮೌಲ್ಯವರ್ಧನೆ, ಶೀತಲ ಸಂಗ್ರಹಣೆ ಮತ್ತು ಮೀನುಗಾರಿಕೆ ಕ್ಷೇತ್ರದಲ್ಲಿ ಹೆಚ್ಚಿನ ಹೂಡಿಕೆ ಆಕರ್ಷಿಸಲು ಇಲಾಖೆ ವತಿಯಿಂದ ಕೈಗೊಂಡಿರುವ ಕ್ರಮಗಳೇನು; | ಯಾಂತ್ರೀಕೃತ ಮತ್ತು ಮೋಟಾರೀಕೃತ ಮೀನುಗಾರಿಕೆ ದೋಣಿಗಳಲ್ಲಿ ಟ್ರಾನ್ಸ್‌ಪಾಂಡರ್‌ಗಳನ್ನು ಅಳವಡಿಸಲಾಗುತ್ತಿದ್ದು, ಮೀನು ಲಭ್ಯತೆ ಬಗ್ಗೆ ಸಂದೇಶ ರವಾನಿಸಬಹುದಾಗಿರುತ್ತದೆ. ಇದರಿಂದ ನಿಖರವಾದ ಸ್ಥಳಕ್ಕೆ ದೋಣಿಗಳು ಧಾವಿಸಿ ಮೀನು ಹಿಡಿಯಬಹುದಾಗಿರುತ್ತದೆ. ಇದರಿಂದ ತೈಲಕ್ಕಾಗಿ ಹೂಡಿಕೆ ವೆಚ್ಚ ತಗ್ಗಿಸಬಹುದಾಗಿದೆ ಮತ್ತು ಮೀನು ಹುಡುಕುವುದಕ್ಕಾಗಿ ಸಾಗಾಣೆ ವೆಚ್ಚದ ನಷ್ಟವನ್ನು ಕಡಿಮೆ ಮಾಡಿಕೊಳ್ಳಬಹುದಾಗಿರುತ್ತದೆ.<br><br>ಮೀನು ಸಾಗಿಸಲು ಶಾಖನಿರೋಧಕ ಪೆಟ್ಟಿಗೆ ವಿತರಣೆ, ಮೀನು ಮಾರಾಟ ಮಾಡಲು ದ್ವಿ-ಚಕ್ರ / ನಾಲ್ಕು ಚಕ್ರ ವಾಹನ ಖರೀದಿಗೆ ಸಹಾಯಧನ ವಿತರಣೆ, Insulated ವಾಹನ ಮತ್ತು Refrigerated ವಾಹನಗಳ ಖರೀದಿಗೆ ಸಹಾಯಧನ ನೀಡಲಾಗುತ್ತಿದೆ. |

| | | |
|---|---|---|
| | | ಮೀನು ಶೀಘ್ರ ಕೆಡದಂತೆ ಬಳಸುವ ಮಂಜುಗಡ್ಡೆ ತಯಾರಿಕೆಗಾಗಿ ಮಂಜುಗಡ್ಡೆ ಸ್ಥಾವರಗಳು ಬಳಸುವ ವಿದ್ಯುತ್ ಮೇಲಿನ ಸಹಾಯಧನ ವಿತರಿಸಲಾಗುತ್ತಿದೆ. ಹೆಚ್ಚಿನ ಮಂಜುಗಡ್ಡೆ ಲಭ್ಯವಾಗುವಂತೆ ಅದರ ತಯಾರಿಕೆಗೆ ಉತ್ತೇಜನ ನೀಡಲು ಮಂಜುಗಡ್ಡೆ ಸ್ಥಾವರ ನಿರ್ಮಾಣಕ್ಕೆ ಅಥವ ಉನ್ನತೀಕರಣಕ್ಕೆ ಸಹಾಯಧನ ನೀಡಲಾಗುತ್ತಿದೆ.<br><br>ಮೀನುಗಾರಿಕೆ ಕ್ಷೇತ್ರದಲ್ಲಿ ಹೆಚ್ಚಿನ ಹೂಡಿಕೆ ಆಕರ್ಷಿಸಲು ಮತ್ಸ್ಯಮೇಳ, ವಿಶ್ವ ಮೀನುಗಾರಿಕೆ ದಿನಾಚರಣೆ, ಮೀನು ಕೃಷಿಕರ ದಿನಾಚರಣೆ, ರೈತ ದಸರಾ, ಜಿಲ್ಲಾ ಕೃಷಿ ಮೇಳಗಳಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಸದರಿ ಕಾರ್ಯಕ್ರಮಗಳಲ್ಲಿ ಇತ್ತೀಚಿನ ಮೀನುಗಾರಿಕೆ ಕ್ಷೇತ್ರದಲ್ಲಿ ಆಗಿರುವ ಬೆಳವಣಿಗೆಗಳು ನೂತನ ತಾಂತ್ರಿಕತೆಗಳು, ನೂತನ ತಂತ್ರಜ್ಞಾನಗಳು ಕುರಿತಂತೆ ಮಾಹಿತಿ ನೀಡಲಾಗುತ್ತಿದೆ. ಸಾರ್ವಜನಿಕರು, ಮೀನುಗಾರಿಕೆ ಕ್ಷೇತ್ರದಲ್ಲಿನ ಇತರೆ ಭಾಗಿದಾರರು ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮೀನುಗಾರಿಕೆಯಲ್ಲಿನ ಅವಕಾಶಗಳ ಬಗ್ಗೆ ಮಾಹಿತಿ ಪಡೆದುಕೊಂಡಿರುತ್ತಾರೆ ಮತ್ತು ಆಸಕ್ತರು ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ಹೂಡಿಕೆ ಸಂಬಂಧಪಟ್ಟಂತೆ ಮಾರ್ಗೋಪಾಯ ಕಂಡುಕೊಂಡಿರುತ್ತಾರೆ. |
| ಇ) | ಕರಾವಳಿ ಪ್ರದೇಶದ ಜಿಲ್ಲೆಗಳಲ್ಲಿ ಕಳಪೆ ರಸ್ತೆ ಸಂಪರ್ಕ ಮತ್ತು ಸೀಮಿತ ಮೀನುಗಾರಿಕೆ ಮೂಲ ಸೌಕರ್ಯಗಳಿಂದ ಮೀನುಗಳ ಸಾಗಣೆ ಮತ್ತು ಮಾರಾಟಕ್ಕೆ ಅಡ್ಡಿಯಾಗುತ್ತಿದ್ದು, ಈ ಕುರಿತು ಇಲಾಖೆ ವತಿಯಿಂದ ಕೈಗೊಂಡ ಕ್ರಮಗಳೇನು ? | ಕರಾವಳಿಯ ಮೂರು ಜಿಲ್ಲೆಗಳಲ್ಲಿ ಒಟ್ಟು 228 ಮೀನುಗಾರಿಕೆ ಕೊಂಡಿ ರಸ್ತೆಗಳಿದ್ದು, ಅವುಗಳ ಉದ್ದ 369 ಕಿಲೋಮೀಟರ್‌ವಿರುತ್ತದೆ. ಕಳೆದ ಸಾಲಿನಲ್ಲಿ ರೂ.22.00 ಕೋಟಿಗಳ ವೆಚ್ಚದಲ್ಲಿ ಕೊಂಡಿ ರಸ್ತೆಗಳನ್ನು ದುರಸ್ತಿ ಮಾಡಲಾಗಿದೆ.<br><br>2025-26 ನೇ ಸಾಲಿನ ಆಯವ್ಯಯ ಭಾಷಣದಲ್ಲಿ "ಕರಾವಳಿ ಜಿಲ್ಲೆಗಳಲ್ಲಿನ ಮೀನುಗಾರಿಕೆ ಕೊಂಡಿ ರಸ್ತೆಗಳನ್ನು ನಬಾರ್ಡ್ ಸಹಯೋಗದೊಂದಿಗೆ ಅಭಿವೃದ್ಧಿ ಪಡಿಸಲು ರೂ.30.00 ಕೋಟಿ ಒದಗಿಸಲಾಗುವುದು" ಎಂದು ಘೋಷಿಸಲಾಗಿದೆ. ಅದರಂತೆ ಕೊಂಡಿ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಸೂಕ್ತ ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ಪಸಂಮೀ ಇ-123 ಮೀಇಇ 2025

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು